# ದೀಪಾವಳಿ: ನವೋದ್ಯಮಿ ವಿಶೇಷ ಸಂತೆ

**ಸಂ.ಕ. ಸಮಾಚಾರ ಹುಬ್ಬಳ್ಳಿ**

ದೇಶಪಾಂಡೆ ಫೌಂಡೇಶನ್‌ನ ನವೋದ್ಯಮಿಯಿಂದ ದೀಪಾವಳಿ ನಿಮಿತ್ತ ಸಣ್ಣ ಉದ್ದಿಮೆದಾರರಿಗಾಗಿ ನಗರದ ದೇಶಪಾಂಡೆ ನಗರದ ಸವಾಯಿ ಗಂಧರ್ವ ಹಾಲ್‌ನಲ್ಲಿ ಅ. 18 ರಿಂದ 21ರವರೆಗೆ ಮೇಗಾ ಉತ್ಸವ-2019 ನವೋದ್ಯಮಿ ಸಂತೆ ಹಮ್ಮಿಕೊಳ್ಳಲಾಗಿದೆ.

ದೇಸಿ ಉತ್ಪನ್ನಗಳನ್ನು ಪರಿಚಯಿಸುವುದು ಈ ಉತ್ಸವದ ಉದ್ದೇಶವಾಗಿದ್ದು, ಸಣ್ಣ ಗುಡಿಕೈಗಾರಿಕೆ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ಹಿನ್ನೆಲೆ ಉತ್ಸವದಲ್ಲಿ ಸ್ಟಾಲ್‌ಗಳನ್ನು ಹಾಕಲಾಗುತ್ತಿದೆ.

ನಾಲ್ಕು ದಿನಗಳ ಕಾಲ ಬೆಳಗ್ಗೆ ವಿವಿಧ ಕ್ಷೇತ್ರಗಳ ಉದ್ಯಮಿಗಳಿಗೆ ಇಲಾಖೆಗಳಿಂದ ದೊರೆಯುವ ಸೌಲಭ್ಯಗಳ ಕುರಿತು ಮಾಹಿತಿ ಒದಗಿಸುವುದು, ಮಧ್ಯಾಹ್ನ ಮಹಿಳೆಯರಿಗಾಗಿ ಆಟೋಟ ಸ್ಪರ್ಧೆಗಳು, ಸಂಜೆ ಮನೋರಂಜನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಉತ್ಸವ ಅತ್ಯಂತ ವಿಶೇಷವಾಗಿದ್ದು, ಹಬ್ಬಕ್ಕೆ ಬಳಕೆ ಮಾಡುವ ಎಲ್ಲ ವಸ್ತುಗಳು ಒಂದೆ ಸೂರಿನಡಿ ದೊರೆಯಲಿದ್ದು, ಮನೋರಂಜನೆಯೊಂದಿಗೆ ಖರೀದಿ ಸಹ ಮಾಡಬಹುದಾಗಿದೆ. ಉತ್ಸವದಲ್ಲಿ ಹಬ್ಬಕ್ಕೆ ಉಪಯುಕ್ತ ಆಹಾರ ಪದಾರ್ಥಗಳು, ಸಾವಯುವ ಪದಾರ್ಥಗಳು, ವಿವಿಧ ಬಗೆಯ ತಿಂಡಿಗಳು, ಸಿರಿಧಾನ್ಯ, ಕೈಮಗ್ಗದ ಸೀರೆಗಳು, ಉಡುಪುಗಳು, ಕರಕುಶಲ ವಸ್ತುಗಳ ಪ್ರದರ್ಶನ ಹಾಗೂ ಮಾರಾಟ ಮಳಿಗೆಗಳನ್ನು ಆಯೋಜಿಸಲಾಗಿದೆ. ಈ ಉತ್ಸವದಲ್ಲಿ ಮೇಲ್ಕಂಡ ವಸ್ತುಗಳನ್ನು ಮಾರಾಟ ಮಾಡಬಯಸುವವರು ಉತ್ಸವದ ಸದುಪಯೋಗ ಪಡೆಯಬಹುದಾಗಿದೆ.

ಆಸಕ್ತರು ಮಳಿಗೆಗಳನ್ನು ಹಾಕಲು ನವೋದ್ಯಮಿ ದೇಶಪಾಂಡೆ ಫೌಂಡೇಶನ್, ಸ್ಯಾಂಡ್‌ಬಾಕ್ಸ್ ಸ್ಟಾರ್ಟ್‌ಅಪ್ ಹುಬ್ಬಳ್ಳಿ ಅಥವಾ 86186-50819, 8880964624ಗೆ ಸಂಪರ್ಕಿಸಲು ನವೋದ್ಯಮಿಯ ಕಾರ್ಯಕ್ರಮ ಸಂಯೋಜಕಿ ರಾಜೇಶ್ವರಿ ಲದ್ದಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.